# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 25 (134)
ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ. ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 10.07.2018
ಉತ್ತರಿಸಬೇಕಾದವರು : ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ. | ಶಿವಮೊಗ್ಗ ನಗರದಲ್ಲಿ ಸರ್ಕಾರ ಒಳಚರಂಡಿ ಸಂಪರ್ಕ ಒದಗಿಸಲು ಯಾವ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೊಂಡಿರುತ್ತದೆ; (ವಿವರ ನೀಡುವುದು) | 1. ಶಿವಮೊಗ್ಗ ನಗರ ಒಳಚರಂಡಿ ಯೋಜನೆಗೆ ಸರ್ಕಾರದ ಸರ್ಕಾರದ ಆದೇಶ ಸಂಖ್ಯೆ: ನಅಇ 2 ಯುಡಿಎಸ್ 2007, ದಿನಾಂಕ: 24.2.2007 ರಲ್ಲಿ ರೂ.6180 ಲಕ್ಷಗಳಿಗೆ ರಾಜ್ಯ ಯೋಜನೆಯಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಪರಿಷ್ಕೃತ ಅಂದಾಜಿನ ಮೊತ್ತ ರೂ.11500.00 ಲಕ್ಷಗಳಿಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 9 ಯುಡಿಎಸ್ 2016, ದಿನಾಂಕ: 09.11.2017ರಲ್ಲಿ ಅನುಮೋದನೆ ನೀಡಲಾಗಿದೆ.<br><br>ಸದರಿ ಯೋಜನೆಯಲ್ಲಿ ಶಿವಮೊಗ್ಗ ನಗರದ ಸಮಗ್ರ ಒಳಚರಂಡಿ ಯೋಜನೆಯ ವಿವಿಧ ವ್ಯಾಸದ ಗ್ರಾಮಸಾರ ಕೊಳವೆ ಮಾರ್ಗಗಳ ಅಳವಡಿಕೆ, ಔಟ್ ಫಾಲ್ ಕೊಳವೆ ಮಾರ್ಗದ ಅಳವಡಿಕೆ, ವೆಟ್‌ವೆಲ್‌ಗಳ ನಿರ್ಮಾಣ, ಏರು ಕೊಳವೆ ಮಾರ್ಗ, ಯಂತ್ರೋಪಕರಣಗಳ ಅಳವಡಿಕೆ, ತ್ಯಾವರೆಚಟ್ನಳ್ಳಿಯ ಸಮೀಪ 35.58 ಎಂ.ಎಲ್.ಡಿ. ಸಾಮರ್ಥ್ಯದ ಮಲಿನ ನೀರಿನ ಶುದ್ದೀಕರಣ ಘಟಕದ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಒಳಗೊಂಡಿರುತ್ತದೆ. ಈ ಯೋಜನೆಯಡಿಯಲ್ಲಿ ಗೃಹಸಂಪರ್ಕ ನೀಡಲು ಅವಕಾಶ ಕಲ್ಪಿಸಿರುವುದಿಲ್ಲ.<br><br>2. ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯು 3ನೇ ಎಸ್.ಹೆಚ್.ಪಿ.ಎಸ್.ಸಿ ದಿ:10-3-2016 ರಲ್ಲಿ ಶಿವಮೊಗ್ಗ ನಗರಕ್ಕೆ ಒಳಚರಂಡಿ ವ್ಯವಸ್ಥೆ ಯೋಜನೆಗೆ ರೂ. 58.58 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ.<br><br>ಈ ಯೋಜನೆಯಲ್ಲಿ ಹೊರವಲಯದ ತ್ಯಾವರೆಚಟ್ನಹಳ್ಳಿ, ಗೋಪಿಶೆಟ್ಟಿ ಕೊಪ್ಪ, ನವುಲೆ, ಸೂಳೇಬೈಲು, ಊರುಗಡೂರು ಮತ್ತು ಪುರಲೆ ಬಡಾವಣೆಗಳಲ್ಲಿ ಒಳಚರಂಡಿ ಕೊಳವೆ ಮಾರ್ಗಗಳನ್ನು ಅಳವಡಿಸುವುದು ಮತ್ತು ಪುರಲೆಯಲ್ಲಿ 5.13 ಎಂಎಲ್‌ಡಿ ಸಾಮರ್ಥ್ಯದ ಎಸ್.ಬಿ.ಆರ್ ತಂತ್ರಜ್ಞಾನದ ಮಲಿನ ನೀರು ಶುದ್ದೀಕರಣ ಘಟಕ ನಿರ್ಮಿಸುವ ಕಾಮಗಾರಿ, ಮೂರು ಸಂಖ್ಯೆಯ ವೆಟ್‌ವೆಲ್‌ಗಳ ನಿರ್ಮಾಣ ಮತ್ತು ಪಂಪ್‌ಸೆಟ್‌ಗಳನ್ನು ಅಳವಡಿಸಿ |
| ಆ. | ಈ ಯೋಜನೆಯ ಅಂದಾಜು ವೆಚ್ಚದ ವಿವರ ನೀಡುವುದು. | |

| | | |
|---|---|---|
| | | ಚಾಲನೆಗೊಳಿಸುವ ಕಾಮಗಾರಿ ಹಾಗೂ 7460 ಗೃಹ ಸಂಪರ್ಕ ಕಲ್ಪಿಸಲು ಅನುವು ಮಾಡಲಾಗಿದೆ.<br><br>3. ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿಯಲ್ಲಿ (ಹೆಚ್ಚುವರಿ ಅನುದಾನದಡಿ) ಶಿವಮೊಗ್ಗ ನಗರಕ್ಕೆ ಒಳಚರಂಡಿ ಯೋಜನೆಯನ್ನು ರೂ.7.00 ಕೋಟಿಗಳಿಗೆ ದಿನಾಂಕ 09.11.2017 ರಂದು ನಡೆದ 8ನೇ SHPSC ಅನುಮೋದನೆ ನೀಡಲಾಗಿರುತ್ತದೆ.<br><br>ಈ ಯೋಜನೆಯಡಿ ವೆಟ್‌ವೆಲ್ ಪಂಪುಮನೆ ಜೊತೆ, ಡಿ.ಐ. ಏರು ಕೊಳವೆ ಮಾರ್ಗ ವಿದ್ಯುತ್ ಯಂತ್ರಗಳು ಹಾಗೂ ಮನೆ ಸಂಪರ್ಕಗಳಿಗೆ ಅವಕಾಶ ಕಲ್ಪಿಸಲಾಗಿದೆ. |
| ಇ. | ಈ ಯೋಜನೆಯ ಕಾಮಗಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ? (ವಿವರ ನೀಡುವುದು) | 1. ಶಿವಮೊಗ್ಗ ನಗರ ಸಮಗ್ರ ಒಳಚರಂಡಿ ಯೋಜನೆಯನ್ನು ಮೆ॥ ಜಿ.ವಿ.ಪಿ.ಆರ್ ಇಂಜಿನಿಯರ್ಸ್, ಹೈದ್ರಾಬಾದ್ ಇವರಿಗೆ ಎರಡು ಪ್ಯಾಕೇಜ್ ಅಡಿಯಲ್ಲಿ ದಿನಾಂಕ:19.03.2009 ರಲ್ಲಿ ವಹಿಸಲಾಗಿತ್ತು, ಟೆಂಡರ್ ಅವಧಿಯಲ್ಲಿ ಕೇವಲ ಶೇ 30 % ರಷ್ಟು ಪ್ರಗತಿಯನ್ನು ಸಾಧಿಸಿದ್ದರಿಂದ, ಹಾಗೂ ನಿಧಾನಗತಿಯ ಪ್ರಗತಿಯಿಂದಾಗಿ ಗುತ್ತಿಗೆದಾರರ ಹೊಣೆ ಮತ್ತು ವೆಚ್ಚದ ಜವಾಬ್ದಾರಿಯಡಿಯಲ್ಲಿ ಗುತ್ತಿಗೆಯನ್ನು ರದ್ದು ಪಡಿಸಲಾಗಿದೆ.<br><br>ಪ್ಯಾಕೇಜ್ 1 ಹಾಗೂ 2ರ ಗುತ್ತಿಗೆಯಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಎರಡು ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದು ಮೆ॥ ವಿ.ಎಸ್.ಎ ಇನ್ಫ್ರಾ ಪ್ರಾಜೆಕ್ಟ್ಸ್, ಹೈದ್ರಾಬಾದ್ ಇವರಿಗೆ ದಿನಾಂಕ 06.02.2013 ಹಾಗೂ 23.08.2013ರಲ್ಲಿ ಕ್ರಮವಾಗಿ ವಹಿಸಲಾಗಿರುತ್ತದೆ.<br><br>2. ಕೇಂದ್ರ ಪುರಷ್ಕೃತ ಅಮೃತ್ ಯೋಜನೆಯಡಿ ಶಿವಮೊಗ್ಗ ನಗರದ ಒಳಚರಂಡಿ ಯೋಜನೆಯ ಕಾಮಗಾರಿಗಳನ್ನು (ಅಂದಾಜಿನ ಮೊತ್ತ ರೂ. 58.58 ಕೋಟಿ) ಮೆಸ್॥ ಜಯಂತಿ ಸೂಪರ್ ಕನ್ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಗುಜರಾತ್ ಅವರಿಗೆ ವಹಿಸಲಾಗಿದೆ.<br><br>3. ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಶಿವಮೊಗ್ಗ ನಗರದ ಒಳಚರಂಡಿ ಯೋಜನೆಯ ಕಾಮಗಾರಿಗಳನ್ನು (ಹೆಚ್ಚುವರಿ ಅನುದಾನ) ಕೈಗೊಳ್ಳಲು ಟೆಂಡರನ್ನು ದಿನಾಂಕ 21.06.2018 ರಲ್ಲಿ ಕರೆಯಲಾಗಿದೆ. |

ನಅಇ 40 ಯುಡಬ್ಲ್ಯೂಎಲ್ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು